ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ :	ಜಿಲ್ಲೆಯ ಹೆಸರು	ಖಾಲಿಯಿರುವಒಟ್ಟು ಹುದ್ದೆಗಳ ಸಂಖ್ಯೆ :	ಖಾಲಿಯಿರುವ ಹುದ್ದೆಗಳಲ್ಲಿ ಗುತ್ತಿಗೆ ಆಧಾರದ ಮೇಲಿನ ಅಭ್ಯರ್ಥಿಗಳು ಕೆಲಸ ಮಾಡುತ್ತಿರುವ ಹುದ್ದೆಗಳ ಸಂಖ್ಯೆ :	ಈಗ ಜಿಲ್ಲಾ ಆಯ್ಕೆ ಸಮಿತಿಗಳು ಭರ್ತಿ ಮಾಡಲು ಪ್ರಕಟಿಸಿರುವ ಹುದ್ದೆಗಳ ಸಂಖ್ಯೆ :
೧.	ಬೆಂಗಳೂರು ದಕ್ಷಿಣ	೫೨	೫೨	–
೨.	ಬೆಂಗಳೂರು ಗ್ರಾಮಾಂತರ	೭೪೮	೪೩೮	೩೧೦
೩.	ಚಿತ್ರದುರ್ಗ	೩೩೩	೧೦೫	೨೨೮
೪.	ಕೋಲಾರ	೫೫೯	೨೫೯	೩೦೦
೫.	ಶಿವಮೊಗ್ಗ	೫೫೨	೨೯೭	೨೫೫
೬.	ತುಮಕೂರು	೫೫೩	೨೧೧	೩೫೨
೭.	ಮೈಸೂರು	೫೯೫	೨೪೦	೩೫೫
೮.	ಮಂಡ್ಯ	೪೮೬	೧೬೦	೩೨೬
೯.	ದಕ್ಷಿಣ ಕನ್ನಡ ಜಿಲ್ಲೆ	೨೬೩	೧೧೩	೧೫೦
೧೦.	ಹಾಸನ	೪೭೩	೨೫೩	೨೨೦
೧೧.	ಚಿಕ್ಕಮಗಳೂರು	೩೩೧	೧೩೧	೨೦೦
೧೨.	ಕೊಡಗು	೧೩೫	೪೯	೮೬
೧೩.	ಬೆಳಗಾಂ	೬೮೫	೩೧೧	೩೭೪
೧೪.	ಬಿಜಾಪುರ	೪೦೭	೯೧	೩೧೬
೧೫.	ಧಾರವಾಡ	೫೮೨	೧೭೨	೪೧೦
೧೬.	ಉತ್ತರ	೨೪೫	೯೯	೧೪೬
೨೭.	ಗುಲ್ಬರ್ಗ	೪೩೨	೨೨೦	೨೧೨
೧೮.	ರಾಯಚೂರು	೩೬೮	೧೧೨	೨೫೬
೧೯.	ಬಳ್ಳಾರಿ	೨೭೮	೧೧೭	೧೬೧
೨೦.	ಬೀದರ್	೨೮೪	೧೨೪	೧೬೦
	ಒಟ್ಟು	೮೩೬೧	೩೫೫೪	೪೪೦೭

ಚಿಕ್ಕನಾಯಕನ ಹಳ್ಳಿಯಲ್ಲಿ ಸೇತುವೆಗಳ ನಿರ್ಮಾಣದ ಬಗ್ಗೆ

೧೪೬೭ (೨೨೧೦) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಮುಖ ರಸ್ತೆಗಳಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದ ತೊರೇಸೂರಗೊಂಡನಹಳ್ಳಿ, ತೊರೆ ಸೇತುವೆ, ಜೋಗಿಹಳ್ಳಿ ಹತ್ತಿರ ಚಿಕ್ಕನಾಯಕನಹಳ್ಳಿ ಕೆರೆಹಳ್ಳದ ಸೇತುವೆ, ಶೆಟ್ಟಿಕೆರೆ ಚಿಕ್ಕನಾಯಕನಹಳ್ಳಿ ರಸ್ತೆಗೆ ಶೆಟ್ಟಿಕೆರೆ ಸಮೀಪ ನಿರ್ಮಿಸುತ್ತಿರುವ ಸೇತುವೆಗಳು ಕಳೆದ ೪ ವರ್ಷಗಳಿಂದ ಪೂರ್ಣಗೊಳ್ಳದೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಕಾಮಗಾರಿಗಳನ್ನು ಈ ರೀತಿ ನಾಲ್ಕು ವರ್ಷಗಳಿಂದ ನಿಲ್ಲಿಸಿರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಚಿಕ್ಕನಾಯಕನಹಳ್ಳಿ ಶಾಖ್ಲೂಕಿನ ತೊರೆಸೂರಗೊಂಡನಹಳ್ಳಿ ಸೇತುವೆ ಮತ್ತು ಶೆಟ್ಟಿಕೆರೆ ಸಮೀಪ ನಿರ್ಮಿಸುತ್ತಿರುವ ಸೇತುವೆಗಳು ಕಳೆದ ನಾಲ್ಕು ವರ್ಷಗಳಿಂದ ಪೂರ್ಣಗೊಳ್ಳದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿರುತ್ತದೆ. ಜೋಗಿಹಳ್ಳಿ ಹತ್ತಿರದ ಸೇತುವೆ ೧೯೬೬-೬೭ ನೇ ಸಾಲಿನ ಅಯವ್ಯಯದಲ್ಲಿ ಸೇರಿದ್ದು ಅದೇ ಸಾಲಿನಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತೆ.

ಆ) (೧) ತೊರೆಸೂರಗೊಂಡಹಳ್ಳಿ ಸೇತುವೆ :

ಕಾಮಗಾರಿಯು ೧೯೬೫ ನೇ ಡಿಸೆಂಬರ್‌ನಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಗುತ್ತಿಗೆದಾರರ ವತಿಯಿಂದ ಆದ ವಿಳಂಬದಿಂದಾಗಿ ಕೆಲಸವು ಪೂರ್ಣಗೊಳ್ಳುವುದು ತಡವಾಗಿದೆ. ಈ ಕೆಲಸವು ಈಗ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತಿದ್ದು ಅವರು ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

(೨) ಜೋಗಿಹಳ್ಳಿ ಹತ್ತಿರದ ಚಿಕ್ಕನಾಯಕನಹಳ್ಳಿ ಕೆರೆಹಳ್ಳದ ಸೇತುವೆ ಕೆಲಸದ ಬಗ್ಗೆ ಸ್ಥಳ ಪರಿಸ್ಥಿತಿ (ಸೈಟ್ ಕಂಡೀಷನ್) ಮತ್ತು ತಳಪಾಯದ ಸಮಸ್ಯೆ ಕಂಡುಬರಲಾಗಿ ಸೇತುವೆ ವಿನ್ಯಾಸವನ್ನು ಬದಲಾಯಿಸಬೇಕಾಗಿ ಬಂದಿದ್ದರಿಂದ ಕೆಲಸ ವಿಳಂಬವಾಗಿದೆ. ಈ ಕೆಲಸವು ಈಗ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತಿದ್ದು ಅವರು ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

(೩) ಶೆಟ್ಟಿಕೆರೆ ಸಮೀಪದಲ್ಲಿ ನಿರ್ಮಿಸುತ್ತಿರುವ ಸೇತುವೆ ಕೆಲಸವು ಕೂಡಾ ರಸ್ತೆಯನ್ನೊಳಗೊಂಡಂತೆ ಬಹುಪಾಲು ಮುಗಿದಿರುತ್ತದೆ. ಕೂಡು ರಸ್ತೆಯನ್ನು ಪೂರ್ಣಗೊಳಿಸಲು ಭೂಸ್ವಾಧೀನ ನಡವಳಿಕೆಗಳು ಮುಕ್ತಾಯವಾಗಬೇಕಾಗಿರುವುದರಿಂದ ಸೇತುವೆ ಕೆಲಸವನ್ನು ಪೂರ್ಣಗೊಳಿಸುವುದು ತಡವಾಗಿದೆ.

ಹೆಲಿಕಾಪ್ಟರ್ ಉಪಯೋಗಿಸಂಬ ಬಗ್ಗೆ

೧೪೬೯ (೨೮೪೬) ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸರ್ಕಾರದ ಸಾಮ್ಯದಲ್ಲಿರುವ ಹೆಲಿಕಾಪ್ಟರನ್ನು ಬಳಸುವ ಉದ್ದೇಶ ಮುಖ್ಯ ಮಂತ್ರಿಗಳಿಗಿದೆಯೆ ?

ಆ) ಇದ್ದಲ್ಲಿ ಯಾವ ಯಾವ ಸಂದರ್ಭದಲ್ಲಿ ಬಳಸಲಾಗುವುದು ?

ಇ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಭಾರಿ ಹಾಗೂ ಯಾವ ಸಂದರ್ಭಗಳಲ್ಲಿ ಬಳಸಲಾಗಿದೆ?

ಈ) ಈ ಹೆಲಿಕಾಪ್ಟರ್ ಸಿಬ್ಬಂದಿ ಮತ್ತಿತರ ವ್ಯವಸ್ಥೆಗೆ ತಿಂಗಳಿಗೆ ವೆಚ್ಚವಾಗುತ್ತಿರುವ ಮೊತ್ತ ವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಳಸಲಾಗುತ್ತಿದೆ.

ಆ) ಮತ್ತು ಇ) } ಮಾನ್ಯ ಮುಖ್ಯ ಮಂತ್ರಿಯವರು ಕಳೆದ ೩ ವರ್ಷಗಳಲ್ಲಿ ಅಂದರೆ ೧೯೬೫-೬೬ ರಿಂದ ೧೯೬೭-೬೮ರ ತನಕ ೧೮ ಬಾರಿ ಉಪಯೋಗಿಸಿರುತ್ತಾರೆ. ಪ್ರಕೃತಿ ವಿಕೋಪಕ್ಕೆ ಒಳಗಾದ ಪ್ರದೇಶಗಳ ಮತ್ತು ಮತೀಯಗಲಭೆಗಳೊಳಗಾದ ಪ್ರದೇಶಗಳ ಭೇಟಿ ಮತ್ತು ಇತರೆ ತುರ್ತು ಕೆಲಸಗಳಿಗೆ ಮತ್ತು ವಿಶೇಷ ಸಂದರ್ಭಗಳಲ್ಲಿ ಬಳಸಲಾಗುತ್ತಿದೆ.

ಈ) ತಿಂಗಳಿಗೆ ಸುಮಾರು ೧,೦೬,೦೦೦ ರೂ.ಗಳ ವೆಚ್ಚ ತಗಲುವುದು.

ತಾರಕ ಜಲಾಶಯಕ್ಕೆ ಏತ ನೀರಾವರಿ ಬಗ್ಗೆ

೧೪೭೦ (೨೮೪೯) ಶ್ರೀ ಎಂ. ಶಿವಣ್ಣ (ಹೆಚ್. ಡಿ. ಕೋಟೆ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—